**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ,ಉತ್ತರ ವಲಯ-1,ರಾಜಾಜಿನಗರ,ಬೆಂಗಳೂರು-10**

ಸಂಖ್ಯೆ ಸಿ5. ಮಾ.ನ 01/ 2021-22 ದಿನಾಂಕ 14.07.2021 19F

**ಜ್ಞಾಪನ**

ವಿಷಯ:- ವಿವೇಕ ವಿದ್ಯಾ ಟ್ರಸ್ಟ್ (ರಿ), ಬ್ಯಾಡರಹಳ್ಳಿ, ವಿಶ್ವನೀಡಂ ಅಂಚೆ, ಬೆಂಗಳೂರು -91 ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ. ವಿದ್ಯಾಸಾಮ್ರಾಟ್ ಇಂಟರ್‌ನ್ಯಾಷನಲ್ ಸ್ಕೂಲ್, ನಂ 108, ತುಂಗಾನಗರ ಮುಖ್ಯರಸ್ತೆ, ಬ್ಯಾಡರಹಳ್ಳಿ, ವಿಶ್ವನಿಡಂ ಅಂಚೆ,ಬೆಂಗಳೂರು-91 ಈ ಶಾಲೆಗೆ ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ:-1. ಕಾರ್ಯದರ್ಶಿಗಳ ಪ್ರಸ್ತಾವನೆ ಮೇರೆಗೆ
2.ಶಿಕ್ಷಣ ಅಂಯೋಜಕರು ಇವರ ಶಾಲಾ ಬೇಟಿಯ ಮೇರೆಗೆ

*****

**ಪ್ರಸ್ತಾವನೆ:-**

ವಿವೇಕ ವಿದ್ಯಾ ಟ್ರಸ್ಟ್ (ರಿ), ಬ್ಯಾಡರಹಳ್ಳಿ, ವಿಶ್ವನೀಡಂ ಅಂಚೆ, ಬೆಂಗಳೂರು-91 ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ. ವಿದ್ಯಾಸಾಮ್ರಾಟ್ ಇಂಟರ್‌ನ್ಯಾಷನಲ್ ಸ್ಕೂಲ್, ನಂ 108, ತುಂಗಾನಗರ ಮುಖ್ಯರಸ್ತೆ, ಬ್ಯಾಡರಹಳ್ಳಿ, ವಿಶ್ವನಿಡಂ ಅಂಚೆ, ಬೆಂಗಳೂರು -91 ಈ ಶಾಲೆಗೆ 6 ರಿಂದ 8ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ಅನುಮತಿಯನ್ನು ನೀಡಿದ್ದು. ಸದರಿ ಆದೇಶದನ್ವಯ ಶಾಲೆಯವರು 2020-21 ರಿಂದ 2024-25ನೇ ಸಾಲಿಗೆ 6 ರಿಂದ 8ನೇ ತರಗತಿಗೆ ಮಾನ್ಯತೆ ನವೀಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಉಲ್ಲೇಖ (2)ರಲ್ಲಿ ವರದಿಯಂತೆ ಶಾಲೆಯು ಇಲಾಖಾ ಅನುಮತಿಯಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಈ ಶಾಲೆಗೆ 6 ರಿಂದ 8 ನೇ ತರಗತಿಯ ಆಂಗ್ಲ ಮಾಧ್ಯಮದ ತಲಾ ಒಂದು ವಿಭಾಗಕ್ಕೆ ಶಾಶ್ವತ ಅನುದಾನ ರಹಿತವಾಗಿ 2020-21ನೇ ಸಾಲಿನಿಂದ ಐದು ವರ್ಷಗಳಿಗೆ ಮಾನ್ಯತೆ ನವೀಕರಣವನ್ನು ನೀಡಬಹುದಾಗಿದೆ ಎಂಬ ಅಭಿಪ್ರಾಯ ನೀಡಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ 6 ರಿಂದ 8ನೇ ತರಗತಿಯ ಆಂಗ್ಲ ಮಾಧ್ಯಮದ ತಲಾ ಒಂದು ವಿಭಾಗಕ್ಕೆ ಶಾಶ್ವತ ಅನುದಾನ ರಹಿತವಾಗಿ 2021-22 ರಿಂದ 2025-26 ರವರೆಗೆ ಮಾನ್ಯತೆ ನವೀಕರಣವನ್ನು ನೀಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ವಿವೇಕ ವಿದ್ಯಾ ಟ್ರಸ್ಟ್ (ರಿ), ಬ್ಯಾಡರಹಳ್ಳಿ, ವಿಶ್ವನೀಡಂ ಅಂಚೆ, ಬೆಂಗಳೂರು -91 ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ. ವಿದ್ಯಾಸಾಮ್ರಾಟ್ ಇಂಟರ್‌ನ್ಯಾಷನಲ್ ಸ್ಕೂಲ್, ನಂ 108, ತುಂಗಾನಗರ ಮುಖ್ಯರಸ್ತೆ, ಬ್ಯಾಡರಹಳ್ಳಿ, ವಿಶ್ವನಿಡಂ ಅಂಚೆ, ಬೆಂಗಳೂರು -91 ಈ ಶಾಲೆಗೆ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮ 36(1)(ಬಿ)ರನ್ವಯ, 6 ರಿಂದ 8ನೇ ತರಗತಿಯ ಆಂಗ್ಲ ಮಾಧ್ಯಮದ ತಲಾ ಒಂದು ವಿಭಾಗಕ್ಕೆ ಶಾಶ್ವತ ಅನುದಾನ ರಹಿತವಾಗಿ 2021-22 ರಿಂದ 2025-26 ರವರೆಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕವಾಗಿ ಮಾನ್ಯತೆಯನ್ನು ನವೀಕರಿಸಿದೆ.

ಷರತ್ತುಗಳು:-

1. ಶಿಕ್ಷಕರ ಮತ್ತು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪಾಠೋಪಕರಣ, ಪೀಠೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಬೇಕು.
2. ಅರ್ಹತೆಯುಳ್ಳ ಶಿಕ್ಷಕರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವುದು.
3. ಶುಲ್ಕ ವಸೂಲಾತಿಗೆ ಇಲಾಖಾ ಅನುಮತಿಯನ್ನು ಪಡೆಯುವುದು.
4. ಸಂಸ್ಥೆಯ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಅವರಿಂದ ಪಡೆದ ಒಪ್ಪಿಗೆ ಪತ್ರದ ಪ್ರತಿಯನ್ನು ಹಾಜರುಪಡಿಸುವುದು
5. ಶಿಕ್ಷಕರ ಹೆಸರಿನಲ್ಲಿ ಸೇವಾ ವಹಿ ತೆರೆಯಬೇಕು ಹಾಗೂ ಬ್ಯಾಂಕ್ ಮುಖೇನ ಕನಿಷ್ಠ ವೇತನ ವಿತರಣೆ ಮಾಡಬೇಕು.
6. ಮಕ್ಕಳ ದಾಖಲಾತಿಯಲ್ಲಿ ಮೀಸಲಾತಿ ಕಡ್ಡಾಯವಾಗಿ ಪಾಲಿಸುವುದು.
7. ರಾಜ್ಯ ಪಠ್ಯಕ್ರಮ ಹಾಗೂ ಇಲಾಖೆ ನಿಗದಿಗೊಳಿಸಿದ ಪಠ್ಯ ಪುಸ್ತಕಗಳನ್ನು ಉಪಯೋಗಿಸುವುದು.

8. ಶಾಲಾ ಕಟ್ಟಡ ಮತ್ತು ಆವರಣದಲ್ಲಿ ಬೆಂಕಿ ಅಪಘಾತ ಮತ್ತು ಇತರೆ ಅಪಘಾತಗಳಿಂದ ತೊಂದರೆಯಾಗದಂತೆ ಶಾಲಾ ಕಟ್ಟಡದ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ವಹಿಸತಕ್ಕದ್ದು. ಹಾಗೂ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು
9. ಶಿಕ್ಷಕರರುಗಳ ನೇಮಕಾತಿಯನ್ನು ಶಿಕ್ಷಕ / ವಿದ್ಯಾರ್ಥಿಗಳ ಅನುಪಾತ 1:40:50 ರಂತೆ ಮಾಡಬೇಕು
10. ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು, ಸರ್ಕಾರ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
11. ಶಿಕ್ಷಣ ಕಾಯ್ದೆಯನ್ವಯ ಶಾಲಾ ಸುರಕ್ಷತೆ ಬಗ್ಗೆ ಕ್ರಮ ವಹಿಸುವುದು.
12. ಇಲಾಖೆಗೆ ಅಗತ್ಯವಾದ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಸಕಾಲದಲ್ಲಿ ನೀಡತಕ್ಕದ್ದು.
13. ಆರ್.ಟಿ.ಇ. ಅಡಿಯಲ್ಲಿ ನೊಂದಣಿಯನ್ನು ಕಡ್ಡಾಯವಾಗಿ ಪಡೆಯುವುದು.
14. ಶುಲ್ಕದ ವಿವರ ಮತ್ತು ಶಾಲಾ ಅನುಮತಿ ವಿವರವನ್ನು ಶಾಲಾ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.
15. ಮಕ್ಕಳ ಸುರಕ್ಷತೆ ಬಗ್ಗೆ ಶಾಲೆಯಲ್ಲಿ ಸಿ.ಸಿ.ಟಿ.ವಿ. ಅಳವಡಿಸುವುದು.
16. ಕಟ್ಟಡ ಸುರಕ್ಷತೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆಯುವುದು.

(ವಿ.ರಮೇಶ್)
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರವಲಯ-1
ರಾಜಾಜಿನಗರ, ಬೆಂಗಳೂರು-560010

ಇವರಿಗೆ:-

1. ಕಾರ್ಯದರ್ಶಿಗಳು, ವಿವೇಕ ವಿದ್ಯಾ ಟ್ರಸ್ಟ್ (ರಿ), ಬ್ಯಾಡರಹಳ್ಳಿ, ವಿಶ್ವನೀಡಂ ಅಂಚೆ, ಬೆಂಗಳೂರು -91 ಇವರಿಗೆ
2. ಕಛೇರಿ ಪ್ರತಿ